## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕಅಭಿಯಂತರರಕಛೇರಿ ವಾರ್ಡ್ ಸಂಖ್ಯೆ: 137 ಜೆ.ಜೆ.ಆರ್ ನಗರ ಬೆಂಗಳೂರು

************************************************************************************************************************

dt20-09-2021

ಸಂಖ್ಯೆ: W-137/Committee/Proceding -23/2021-22

# ವಾರ್ಡ್ ಹಂತದ ಸಮಿತಿ ಸಭೆ

## ವಾರ್ಡ್ ಸಂಖ್ಯೆ: 137

**20-09-2021** ರಂದು ಬೆಳಿಗ್ಗೆ **11.30** ಘಂಟೆಗೆ ವಾರ್ಡ್ ಸಂಖ್ಯೆ: **137** ರಾಯಪುರಂ ವಾರ್ಡ್ ಹಂತದ ಸಮಿತಿ ಸಭೆಯನ್ನು ಶ್ರೀ. ಮೊಹಮದ್ ಜಾವೀದ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ಕಾಮಗಾರಿ) ವಸಂತನಗರ ಉಪ ವಿಭಾಗ ಬಿ.ಬಿ.ಎಂ.ಪಿ ಹಾಗೂ ಅಧ್ಯಕ್ಷರು ಮತ್ತು ವಾರ್ಡ್‌ನ ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ **137** ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿ ಅಧಿಕಾರ ಅವಧಿಯು ದಿನಾಂಕ: **10-09-2020**ಕ್ಕೆ ಮುಕ್ತಾಯವಾಗಿದ್ದು, ಬಿ.ಬಿ.ಎಂ.ಪಿಯ ಪ್ರತಿ ವಾರ್ಡ್‌ಗೆ ನೋಡೆಲ್ ಅಧಿಕಾರಿ ನೇಮಕಾತಿ ಮತ್ತು ವಾರ್ಡ್ ಹಂತದ ಸಮಿತಿ ರಚಿಸಿದ್ದು. ವಾರ್ಡ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರ ಹಿತರಕ್ಷಣೆ ಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಅಹ್ವಾನಿಸಿದ ಮಾನ್ಯ ಅಧ್ಯಕ್ಷರಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಸಮಿತಿಯ ಕಾರ್ಯದರ್ಶಿ ಸಭೆಗೆ ಸ್ವಾಗತ ಕೋರುತ್ತಾ ಸಮಿತಿಯ ಅಧ್ಯಕ್ಷರಾದ ಶ್ರೀ.ಮೊಹಮದ್ ಜಾವೀದ್ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು ಹಾಗೂ ಈ ಹಿಂದಿನ ಸಭೆಯ ನಡಾವಳಿಯ ನಿರ್ಣಯಗಳ ಬಗ್ಗೆ ಕೈಗೊಂಡ ಕಾರ್ಯವನ್ನು ಪರಿಶೀಲಿಸಲಾಯಿತು.

### ಸಭೆಯಲ್ಲಿಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಸಹಾಯಕ ಕಾರ್ಯನಿರ್ವಹಕ ಅಧಿಕಾರಿಗಳ ಪ್ರತಿನಿಧಿ ಹಾಗೂ ಕೆಲಸ ಪರಿವೀಕ್ಷಕರು ದೂರು ಪುಸ್ತಕವನ್ನು ಸಭೆಯಲ್ಲಿ ನೀಡಿ ಸಾರ್ವಜನಿಕರಿಂದ ಬಂದ ದೂರುಗಳ ಪಟ್ಟಿ ಮತ್ತು ದೂರುಗಳನ್ನು ಪರಿಹರಿಸಿದ ದಿನಾಂಕ ಮತ್ತು ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಸಭಾ ಸದಸ್ಯರು ವಾರ್ಡ್ ವ್ಯಾಪ್ತಿಯ ರಾಯಪುರಂ ಮುಖ್ಯರಸ್ತೆ, ರಂಗನಾಥ ವೆಂಕಟಸ್ವಾಮಿ ಗಾರ್ಡ್‌ನ್ ಕಾಲೋನಿ ಹಾಗೂ ಇತರೆ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಸ್ತೆ ಗುಂಡಿಗಳಿದ್ದು ತಾವು ಹಿಂದಿನ ಸಭೆಯಲ್ಲಿ ನಿರ್ಣಯಿಸಿದಂತೆ ರಸ್ತೆ ಗುಂಡಿಗಳನ್ನು ಮುಚ್ಚದಿರುವ ಬಗ್ಗೆ ಸಭೆಯುಲ್ಲಿ ಪ್ರಸ್ತಾಪಿಸಿದರು.

ಈ ಬಗ್ಗೆ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ಮಳೆಗಾಲವಿರುವುದರಿಂದ ತುರ್ತಾಗಿ ರಸ್ತೆ ಗುಂಡಿಗಳನ್ನು ಮುಚ್ಚುವುದು ಸಾಧ್ಯವಿಲ್ಲವಿರುವುದಿಲ್ಲ, ಮುಂದಿನ ದಿನಗಳಲ್ಲಿ ಮಳೆ ಕಡಿಮೇಯಾದ ಮೇಲೆ ರಸ್ತೆ ಗುಂಡಿಗಳನ್ನು ಮುಚ್ಚಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಡಬ್ಲೂಎಸ್ಎಸ್‌ಬಿ ಕಛೇರಿಗೆ ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬಿಡಬ್ಲೂಎಸ್ಎಸ್‌ಬಿ ಆಧಿಕಾರಿಗಳು ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಅಧ್ಯಕ್ಷರು ಪ್ರತಿ ನಿತ್ಯ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಪುಸ್ತಕ ಮತ್ತು ವಾಹನಗಳ ಹಾಜರಾತಿಯ ವಿವರವನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು.

ಕಿರಿಯ ಆರೋಗ್ಯ ಪರಿವೀಕ್ಷರು ವಾರ್ಡ್ -137ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಪುಸ್ತಕ ಮತ್ತು ವಾಹನಗಳ ಹಾಜರಾತಿ ಪುಸ್ತಕವನ್ನು ಸಭೆಯಲ್ಲಿ ನೀಡಿದರು ಹಾಗೂ ಹಲವು ಹಬ್ಬ ಹರಿದಿನಗಳು ಹೆಚ್ಚಿಗಿರುವುದರಿಂದ ಕಸ ವಿಲೇವಾರಿ ಘಟಕಗಳಲ್ಲಿ ಮಿಶ್ರಕಸ ವಿಲೇವಾರಿಯಾಗದಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು

ಮಾನ್ಯ ಅಧ್ಯಕ್ಷರು ಕಂದಾಯ ಪರಿವೀಕ್ಷಕರನ್ನು ವಾರ್ಡ್ ವಿಂಗಡನೆಯ ಬಗ್ಗೆ ವಿವರವನ್ನು ವಿವರಣೆ ಕೋರಿದರು

ಕಂದಾಯ ಅಧಿಕಾರಿಗಳು ಸಭೆಯಲ್ಲಿ ವಾರ್ಡ್ ವಿಂಗಡನೆ ಬಗ್ಗೆ ಅಂತಿಮ ನಿರ್ದಾರವಾದ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಕೋವಿಡ್-19 ಆರೋಗ್ಯ ಇಲಾಖೆಯವರಿಗೆ ಕೋವಿಡ್-19 ಇತ್ತಿಚೆಗೆ ಕೈಗೊಂಡ ಕ್ರಮಗಳ ಸಭೆಯಲ್ಲಿ ವಿವರಣೆ ಕೋರಿದರು

ಆರೋಗ್ಯ ವೈದ್ಯಾಧಿಕಾರಿಗಳ ಪ್ರತಿನಿಧಿಯು ಕೋವಿಡ್-19 3ನೇ ಅಲೆಯಿಂದ ಕೋವಿಡ್-19 ಟೆಸ್ಟ್‌ಗಳನ್ನು ಹೆಚ್ಚಿಸಿದ್ದು ಹಾಗೂ ಆಶಾ ಕಾರ್ಯಕರ್ತೆಯರು ಪ್ರತಿ ಮನೆಗೆ ಹೋಗಿ ಪ್ರತಿಯೋಬ್ಬರ ಆರೋಗ್ಯ ವಿಚಾರಿಸಿ ಹಾಗೂ ವಾರ್ಡ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಅಭಿಯಾನವನ್ನು ಕೈಗೊಂಡು ಅಧಿಕ ಜನರಿಗೆ ಮನಹೊಲಿಸಿ ಲಸಿಕೆ ನೀಡುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು..

ಮಾನ್ಯ ಸದಸ್ಯರು ವಾರ್ಡ್-137ರ ವ್ಯಾಪ್ತಿಯಲ್ಲಿ ಹಲವು ರೀತಿಯಲ್ಲಿ ಬೇಸ್ಕಾಂಗೆ ಸಂಬಂಧಿಸಿದ ದೂರುಗಳು ಬಂದಿದ್ದು ರಾತ್ರಿಯ ಸಮಯದಲ್ಲಿ ಸ್ವಚ್‌ಗಳು ಹಾಗೂ ಲೈಟ್‌ಗಳು ಹಾಳಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಸಹಾಯಕ ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಂ) ರವರ ಪ್ರತಿನಿದಿಯು ಸದರಿ ವಿಷಯದ ಬಗ್ಗೆ ತುರ್ತು ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ಗಣೇಶ ಪ್ರತಿಸ್ಥಾಪನೆಯ ಬಗ್ಗೆ ಸಭೆಯಲ್ಲಿ ವಿವರವನ್ನು ಕೋರಿದರು.

ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ಗಣೇಶ ಪ್ರತಿಸ್ಥಾಪನೆಯ ವಿಚಾರವಾಗಿ ಸಮೀತಿಯ ಸದಸ್ಯರಿಗೆ ಮುಖ್ಯ ಆಯುಕ್ತರ ಸೂತ್ತೋಲೆಯನ್ನು ಸಭೆಯಲ್ಲಿ ಮಂಡಿಸಿ, ಒಂದು ವಾರ್ಡ್‌ಗೆ ಒಂದು ಗಣೇಶವನ್ನು ಸ್ಥಾಪನೆ ಮತ್ತು 5 ದಿನಗಳ ಮಾತ್ರ ಅನುಮತಿ ಇರುವ ಬಗ್ಗೆ ಸಭೆಯಲ್ಲಿ ವಿವರಣೆ ನೀಡಿದರು.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

## ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮಿತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಮೊಹಮದ್ ಜಾವೀದ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಸಂತನಗರ ಉಪ ವಿಭಾಗ) ಬಿ.ಬಿ.ಎಂ.ಪಿ. ದೂ. ಸಂಖ್ಯೆ: 9845720286 | ಅಧ್ಯಕ್ಷರು ಮತ್ತು ವಾರ್ಡ್‌ನ ನೋಡಲ್ ಅಧಿಕಾರಿ | |
| 2 | ಶ್ರೀ ಗಿರಿಧರ್ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 137 ಬಿ.ಬಿ.ಎಂ.ಪಿ. ದೂ. ಸಂ 8618436036 | ಸದಸ್ಯ ಕಾರ್ಯದರ್ಶಿ | |
| 3 | ಗೀತಾ ಹೆಚ್. ದೂ. 9986537126 ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ -137 | ಸದಸ್ಯರು | |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ (ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ರವರ ಪ್ರತಿನಿಧಿ ಶ್ರೀ ಬಾಬು (ಕೆಲಸ ಪರಿವೀಕ್ಷಕರು) ವಾರ್ಡ್-137, ದೂ. 9342582372 | ಸದಸ್ಯರು | V. B |
| 5 | ಆರೋಗ್ಯಾಧಿಕಾರಿಗಳು, ಚಾಮರಜಪೇಟೆ ವಿಭಾಗ ರವರ ಪ್ರತಿನಿಧಿ ಬಸವಲಿಂಗಯ್ಯ ದೂ. 9686418488 | ಸದಸ್ಯರು | |
| 6 | ಶ್ರೀ ಸಿ. ಆರ್ ರವಿ ಪ್ರಸಾದ್ ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845802912 | ಸದಸ್ಯರು | |
| 7 | ಶ್ರೀ ರಿಜ್ವಾನ್, ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845262860 | ಸದಸ್ಯರು | Rizwan |
| 8 | ಶ್ರೀ ರಾಜು, ದೂ.. 7676512877 ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. | ಸದಸ್ಯರು | |
| 9 | ಶ್ರೀಮತಿ ಆಶಾ. ದೂ. 9731317223 ಕಂದಾಯ ಪರಿವೀಕ್ಷಕರು | ಸದಸ್ಯರು | |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿ | ಸದಸ್ಯರು | |
| 11 | ಸಹಾಯಕ ಕಾರ್ಯಪಾಲಕ ಅಭಿಯಂತರರ (ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ ಶ್ರೀ ಕುಮಾರ್ ಸ್ವಾಮಿ, ದೂ. 9060341644 | ಸದಸ್ಯರು | |
| 12 | ಸಹಾಯಕ ಕಾರ್ಯ ಪಾಲಕ ಅಭಿಯಂತರರು (ಬೆಸ್ಕಂ) ರವರ ಪ್ರತಿನಿಧಿ. ದೂ. 9449840364 | ಸದಸ್ಯರು | |

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 137
ವಾರ್ಡ್ ಹಂತದ ಸಮಿತಿ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 137